**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ:೦5:ಯೋಜನೆ:ಅ.ಬಿ:2021-22

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ:15-03-2022

# ಸುತ್ತೋಲೆ

ವಿಷಯ: 2021-22 ನೇ ಸಾಲಿನಲ್ಲಿ ಕಛೇರಿ ಮತ್ತು ಇತರೆವೆಚ್ಚಗಳಿಗಾಗಿ ಬಿಡುಗಡೆ ಮಾಡಿರುವ ಅನುದಾನವನ್ನು ಬಳಕೆ ಮಾಡುವ ಬಗ್ಗೆ.

ಉಲ್ಲೇಖ: ವಿವಿಧ ದಿನಾಂಕಗಳ ಸಮ ಸಂಖ್ಯೆಯ ಅನುದಾನ ಬಿಡುಗಡೆ ಆದೇಶಗಳು

--*--

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2021-22ನೇ ಸಾಲಿನಲ್ಲಿ ಉಲ್ಲೇಖಿತ ಆದೇಶಗಳಲ್ಲಿ ಲೆಕ್ಕಶೀರ್ಷಿಕೆ: **'2202-03-103-2-01' ಇತರೆ ಸರ್ಕಾರಿ ಕಾಲೇಜುಗಳು** ಉಪ ಲೆಕ್ಕಶೀರ್ಷಿಕೆ **(041)**ರಡಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಿಬ್ಬಂದಿಗಳ ಪ್ರಯಾಣ ವೆಚ್ಚಕ್ಕಾಗಿ ಪ್ರಾದೇಶಿಕ ಜಂಟಿ ನಿರ್ದೇಶಕರ ಕೋರಿಕೆಯ ಮೇರೆಗೆ, ಉಪ ಲೆಕ್ಕಶೀರ್ಷಿಕೆ **(051)**ರಡಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕಛೇರಿ ಮತ್ತು ಇತರೆ ವೆಚ್ಚಗಳಿಗಾಗಿ, ಉಪ ಲೆಕ್ಕಶೀರ್ಷಿಕೆ **(052)**ರಡಿಯಲ್ಲಿ ದೂರವಾಣಿ ವೆಚ್ಚಕ್ಕಾಗಿ ಹಾಗೂ ಉಪಲೆಕ್ಕಶೀರ್ಷಿಕೆ **(071)** ರಲ್ಲಿ ವಿದ್ಯುತ್ ವೆಚ್ಚಕ್ಕಾಗಿ ಮತ್ತು ಲೆಕ್ಕಶೀರ್ಷಿಕೆ:**2202-03-103-2-08** ವಿದ್ಯಾರ್ಥಿನಿಲಯಗಳು ಉಪಲೆಕ್ಕಶೀರ್ಷಿಕೆ **(051)**ರಡಿಯಲ್ಲಿ ಪ್ರಾಂಶುಪಾಲರ ಹಾಗೂ ಕೋರಿಕೆಯ ಮೇರೆಗೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಆದೇಶಗಳಲ್ಲಿ ಅನುದಾನವನ್ನು ಕೂಡಲೇ ಬಳಸಿಕೊಂಡು ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. ಆದರೂ ಸಹ ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ಅನುದಾನವನ್ನು ಬಳಸಿಕೊಂಡು ಇದುವರೆವಿಗೂ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸುವುದಾಗಲಿ ಅಥವಾ ಅನುದಾನ ಅವಶ್ಯವಿಲ್ಲದಿದ್ದಲ್ಲಿ ಮರುಒಪ್ಪಿಸಿಲ್ಲದಿರುವುದು ಖಜಾನೆ-2ರ ವೆಚ್ಚಪಟ್ಟಿಯಿಂದ ತಿಳಿದುಬಂದಿರುತ್ತದೆ.

**ಆದ್ದರಿಂದ ಬಿಡುಗಡೆಯಾಗಿರುವ ಅನುದಾನವನ್ನು ದಿ:18.03.2022ರ ಒಳಗಾಗಿ ವೆಚ್ಚಮಾಡಿ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸುವಂತೆ ತಪ್ಪಿದಲ್ಲಿ ಬಳಕೆಗೆ ಕ್ರಮಕೈಗೊಳ್ಳದೇ ಇರಲು ಕಾರಣರಾದವರ ಮೇಲೆ ಸೂಕ್ತ ಹೊಣೆಗಾರಿಕೆಯನ್ನು ನಿಗಧಿಪಡಿಸಿ ನಿಯಮಾನುಸಾರ ಶಿಸ್ತುಕ್ರಮ ಕೈಗೊಳ್ಳಲಾಗುವುದು.**

R. Mugeshal 15/3/2022

**ಕಾಲೇಜು ಶಿಕ್ಷಣ ನಿರ್ದೇಶಕರು**

**ಇವರಿಗೆ:**

1. ಪ್ರಾದೇಶಿಕ ಜಂಟಿ ನಿರ್ದೇಶಕರು-ಬೆಂಗಳೂರು,ಮೈಸೂರು,ಶಿವಮೊಗ್ಗ,ಮಂಗಳೂರು,ದಾರವಾಡ ಹಾಗೂ ಕಲಬುರಗಿ.
2. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿಯನ್ನು:**

1. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು.
2. ಕಛೇರಿ ಪ್ರತಿ